

ವಾರದ ಪತ್ರ

## ಒಂದೇ ಕಥೆ, ಅದುವೇ ವ್ಯಥೆ!

ಝೀ ಕನ್ನಡದ 'ಕೃಷ್ಣ ಸುಂದರಿ' ಹಾಗೂ 'ತ್ರಿನಯನಿ' ಧಾರಾವಾಹಿಗಳಲ್ಲಿನ ಕೆಲವು ಘಟನೆಗಳು ಒಂದೇ ರೀತಿಯಿವೆ. ಈ ಎರಡರಲ್ಲೂ ಮಗು ಹುಟ್ಟಿದ ಕೂಡಲೆ ಆಸ್ಪತ್ರೆಯಲ್ಲೇ ಮಗುವನ್ನು ಬದಲಾಯಿಸುತ್ತಾರೆ. ಆಗ ಆಸ್ಪತ್ರೆಯ ಸಿಬ್ಬಂದಿ, ಸಂಬಂಧಿಕರು ಇಲ್ಲದ ಹಾಗೆ ತೋರಿಸುವುದು ಅವಾಸ್ತವ ಅನಿಸಿತು. ಒಂದು ಕಡೆ ಬಾಣಂತಿಯ ಗಂಡನೇ ಮಗುವನ್ನು ಬದಲಾಯಿಸಿದರೆ, ಇನ್ನೊಂದು ಕಡೆ ಅತ್ತಿಗೆ ಬದಲಾಯಿಸುವಳು. ಇವೆಲ್ಲವೂ ಆಸ್ತಿ ಹಾಗೂ ಹೊಟ್ಟೆಕಿಚ್ಚಿನಿಂದ ನಡೆಯುವಂತೆ ಬಿಂಬಿಸಿ ನಂತರ ಮೋಸದ ಅರಿವು ತಿಳಿಸಲು ಹಲವು ವಾರ ಎಳೆಯಲು ಮಾಡುವ ತಂತ್ರಗಳಷ್ಟೇ. ಇದರ ಮೂಲಕ ಸಮಾಜಕ್ಕೆ ಯಾವ ತರಹದ ಸಂದೇಶ ಕೊಡಲು ಹೊರಟಿದ್ದಾರೆ ಎಂಬುದನ್ನು ತಿಳಿಸಬೇಕು. ಇದರ ನಡುವೆ ರುದ್ರಾಕ್ಷಿ ಮಾಲೆ ಧರಿಸಿ ವಿಭೂತಿ ಬಳಿದುಕೊಂಡು ಬರುವಂತಹ ಗುರುಗಳು, ಭವಿಷ್ಯ ನುಡಿಯುವವರಿಗೇನು ಕಡಿಮೆಯಿಲ್ಲ.

—ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಪುರಂದರರ ಕೀರ್ತನೆಗಳ ಸುಧೆ ಹರಿಸಿ

ಕಲರ್ಸ್ ಕನ್ನಡದ 'ದಾಸ ಪುರಂದರ'ದಲ್ಲಿ ಶ್ರೀನಿವಾಸ ನಾಯಕರು ದಾಸರಾಗಿ ಮಾರ್ಪಾಡಾಗುವ ಎಪಿಸೋಡ್ ಸೂಪರ್ ಆಗಿ ಬಂದಿದೆ. ಎಲ್ಲರ ಅಭಿನಯವೂ ಅವರವರ ಪಾತ್ರಕ್ಕೆ ತಕ್ಕಂತೆ ವೇಷಭೂಷಣದಲ್ಲಿಯೂ ಯಾವ ಕೊರತೆ ಇಲ್ಲದೆ ಕಾಲಕ್ಕೆ ತಕ್ಕಂತೆ ಬಂದಿದೆ. ಶ್ರೀನಿ, ಸರಸ್ವತಿ, ಜನ್ನ, ಶಿಂಗ್ಲಾಚಾರಿ, ಶೇಷಮ್ಮಜ್ಜಿ ಎಲ್ಲರೂ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿದ್ದಾರೆ ಎನ್ನಬಹುದು. ಬಡ ಬ್ರಾಹ್ಮಣನ ಪಾತ್ರ ಮಾಡಿರುವವರಂತೂ ಅದ್ಭುತವಾಗಿ ಅಭಿನಯಿಸಿದ್ದಾರೆ. ನವರಸಗಳಲ್ಲಿ ಶಾಂತರಸಕ್ಕೆ ಉದಾಹರಣೆಯಾಗಿ ವ್ಯಾಸರಾಯರ ಹೆಸರನ್ನು ಹೇಳಬಹುದು. ಇನ್ನು ಮುಂದೆ ದಾಸ ವಿರಚಿತ ಸಂಗೀತ ಸುಧೆಯನ್ನು ಯಾವಾಗ ಆಸ್ವಾದಿಸುತ್ತೀವೋ ಎಂದು ಕಾತುರರಾಗಿದ್ದೇವೆ.

—ಶ್ಯಾಮಲಾ ಸತ್ಯ, ಬೆಂಗಳೂರು

## ನಿರ್ದೇಶಕರಿಗೂ ಮರೆವು ಆವರಿಸಿತೆ?

ಕಲರ್ಸ್ ಕನ್ನಡದ 'ಗೀತಾ' ಧಾರಾವಾಹಿಯಲ್ಲಿ ಆಘಾತದಿಂದ ಸುಧಾರಾಣಿ ಹಳೆಯದೆಲ್ಲಾ ಮರೆತಿದ್ದರು. ಕ್ರಮೇಣ ಅವರಿಗೆ ಮರೆತಿದ್ದು ಮತ್ತೆ ನೆನಪಾಗುತ್ತಿದೆ. ಆದರೆ ನಿರ್ದೇಶಕರಿಗೆ ಹಳೆಯದೆಲ್ಲಾ ಮರೆತುಹೋಗುತ್ತಿದೆ!

ಗೀತಾಳಿಗೆ ಒಬ್ಬಳು ತಂಗಿಯಿದ್ದಳು. ವಿಜಯ ಗೆಳೆಯರು ಆಕೆಯನ್ನು ಚುಡಾಯಿಸುತ್ತಿದ್ದರು. ಈಗ ಆಕೆಯ ನೆನಪು ಯಾರಿಗೂ ಇಲ್ಲ. ಗೀತಾಳ ತಂದೆಯನ್ನೂ ಎಲ್ಲ ಮರೆತಿದ್ದಾರೆ. ಸಿತಾರಾ ಅನುಪಸ್ಥಿತಿಯಲ್ಲಿ ಆತನ ಅಣ್ಣ ಭಾನುಮತಿಯ ಮನೆ ಸೇರಿದ್ದ. ವಿಜಿ–ಗೀತಾ ಕಾಲೇಜಿಗೆ ಹೋಗುತ್ತಿಲ್ಲ. ಸುಧಾರಾಣಿಯಂತೆ ನಿರ್ದೇಶಕರಿಗೂ ಮರೆವಿನ ಕಾಯಿಲೆಯೇ? ನೆನಪು ಮರುಕಳಿಸುವುದೆಂದು?

—ಪಿ.ಜೆ. ರಾಘವೇಂದ್ರ, ಮೈಸೂರು

## ಗಾಂಭೀರ್ಯ ಇದ್ದರೇನೆ ಚಂದ

ದೂರದರ್ಶನದ ಚಂದನಕ್ಕೂ ಮತ್ತು ಉಳಿದ ವಾಹಿನಿಗಳಿಗೂ ಪ್ರಮುಖ ವ್ಯತ್ಯಾಸವಿದೆ. ಬಹುತೇಕ ಎಲ್ಲ ವಾಹಿನಿಗಳು ರಿಯಾಲಿಟಿ ಶೋಗಳ ಸ್ಪರ್ಧಾರ್ಥಿಗಳನ್ನು ಅನೇಕ ಪರೀಕ್ಷೆಗಳಿಗೆ ಒಡ್ಡಿ ಆಯ್ಕೆ ಮಾಡುತ್ತಾರೆ. ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮಕ್ಕೆ ವಿನಂತಿ ಮಾಡಿದವರಿಗೆಲ್ಲ ಧಾರಾಳವಾಗಿ ಅವಕಾಶ ಮಾಡಿಕೊಡುತ್ತಾರೆ. ಉತ್ತರ ಗೊತ್ತಿಲ್ಲದಿದ್ದರೂ ಬಝರ್ ಒತ್ತಿ, ತಪ್ಪು ಉತ್ತರಗಳನ್ನು ಹೇಳುತ್ತಾರೆ. ಕೆಲವೊಮ್ಮೆ ಸರಿ ಉತ್ತರ ತಿಳಿದವರನ್ನು ಮೂರನೇ ಸ್ಥಾನಕ್ಕೆ ತಳ್ಳಿ, ಪಾಯಿಂಟ್ ತಮಗೂ ಇಲ್ಲ ಅವರಿಗೂ ಇಲ್ಲ ಎಂಬಂತೆ ಮಾಡುತ್ತಾರೆ. ಇದು ವೀಕ್ಷಕರಿಗೆ ಹಾಸ್ಯ ಅನ್ನಿಸಿದರೂ ದುರಂತ ಎಂದೆನಿಸುತ್ತದೆ. ಆದ್ದರಿಂದ ಗಾಂಭೀರ್ಯ ಇರಬೇಕು ಎಂದು ವಿನಂತಿಸುತ್ತೇನೆ.

—ರಾಮಚಂದ್ರ ಎಂ.ಆರ್., ಬೆಂಗಳೂರು

## ಚುನಾವಣೆ ಬೀದಿ ಪ್ರದರ್ಶನ ಅಲ್ಲ...

ಯಾರೇ ಕೂಗಾಡಲಿ ಊರೇ ಹೋರಾಡಲಿ ಚುನಾವಣಾ ನಿಯಮಗಳನ್ನು ಗಾಳಿಗೆ ತೂರಿದ ಸುದ್ದಿ ಮಾಡುತ್ತೇವೆ ಎನ್ನುವಂತಿದೆ ಸುದ್ದಿ ವಾಹಿನಿಗಳ ಧೋರಣೆ. ಇನ್ನೂ ಚುನಾವಣೆಯ ದಿನಾಂಕ ಅಧಿಕೃತವಾಗಿ ಪ್ರಕಟ ಆಗಿಯೇ ಇಲ್ಲ. ಆದರೂ ಅವು ಚುನಾವಣೆ ಶುರುವಾಗಿದೆ ಎಂಬಂತೆ ವರ್ತಿಸುತ್ತಿವೆ. 'ಚುನಾವಣಾ ಸಮೀಕ್ಷೆ' ಎಂದು ರಾಜಕೀಯ ಪಕ್ಷಗಳ ಬಲಾಬಲವನ್ನು ದಪ್ಪ ಅಂಕಿಗಳ ಸಮೇತ ವಿಧಾನಸಭೆಯ ಚುನಾವಣೆಯ ಅಂತಿಮ ಸುತ್ತಿನ ಫಲಿತಾಂಶ ಏನಾಗಬಹುದು ಎಂದು ಭವಿಷ್ಯ ನುಡಿಯುತ್ತವೆ.

ಹಳ್ಳಿ–ಗಲ್ಲಿ ಗಲ್ಲಿಗಳಿಗೆ ಹೋಗಿ ಸಿಕ್ಕ ಸಿಕ್ಕವರನ್ನೆಲ್ಲಾ ಹಿಡಿದು ನೀವು ಯಾವ ಪಕ್ಷಕ್ಕೆ ವೋಟು ಹಾಕುತ್ತೀರಿ? ಈ ಪಕ್ಷಕ್ಕೆ ಏಕೆ ವೋಟು ಹಾಕುವುದಿಲ್ಲ ಎಂದು ಕೇಳುವುದು ಅಸಹ್ಯ. ಚುನಾವಣೆಯ ದಿನ ಬಂದರೆ ಬಡಪಾಯಿ ವೀಕ್ಷಕರಿಗೆ ದೇವರೇ ಗತಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಸುದ್ದಿಗೆ ಕತ್ತರಿ ಬೀಳದಿರಲಿ

ಸುದ್ದಿ ವಾಹಿನಿಗಳಿಗೆ ಚುನಾವಣೆ, ಕ್ರಿಕೆಟ್ ಮತ್ತು ಬಜೆಟ್ ಎಂದರೆ ಸುಗ್ಗಿಯ ದಿನಗಳು. ರಾಜ್ಯದಲ್ಲಿ ಚುನಾವಣಾ ಪರ್ವ ಆರಂಭವಾಗಿದ್ದು, ಅದರ ಸಂಬಂಧದ ಸುದ್ದಿ, ವಿಶ್ಲೇಷಣೆ, ಸಮೀಕ್ಷೆ, ಸಂದರ್ಶನ, ರ್‍ಯಾಲಿ ಮತ್ತು ಜಾಹೀರಾತು ಹೆಚ್ಚಾಗಿದೆ. ಅದು ಸಹಜವೂ ಹೌದು. ಆದರೆ, ಈ ಧಾವಂತದಲ್ಲಿ ವಾಹಿನಿಗಳು ತಮ್ಮ ಮಾಮೂಲು ಮತ್ತು ದಿನನಿತ್ಯದ ಕಾರ್ಯಕ್ರಮಗಳಿಗೆ ಅಡಚಣೆ ಉಂಟುಮಾಡದಿರಲಿ ಎನ್ನುವುದು ನನ್ನ ಆಶಯ. ಎಂದಿನ ವರ್ತಮಾನದ ಸುದ್ದಿಗಳಿಗೆ ಕತ್ತರಿ ಇಲ್ಲದಂತೆ ಮುಂದುವರಿಯಬೇಕು.

—ರಮಾನಂದ ಶರ್ಮಾ, ಬೆಂಗಳೂರು

## ಹಾಡಿದ್ದೇ ಹಾಡೋ...

ಝೀ ಕನ್ನಡದ ಜನಪ್ರಿಯ 'ಸರಿಗಮಪ' ಮೊದಲಿನ ಸೊಗಡು ಉಳಿಸಿಕೊಳ್ಳದೆ ಸೊರಗುತ್ತಿದೆ. ಹಾಡುಗಳು ಪುನರಾವರ್ತನೆ ಆಗುತ್ತಿವೆ. ನಿರೂಪಕಿ ಅನುಶ್ರೀ ಅವರ ಪೋಷಾಕು ಹಿತಕರವಾಗಿಲ್ಲ. 70ರ ದಶಕದ ಸುಮಧುರವಾದ ಹಾಡುಗಳನ್ನು ಗಾಯಕರಿಂದ ಹಾಡಿಸಿ ಅದರ ಪ್ರಾಮುಖ್ಯತೆ ಅರಿಯುವಂತೆ ಮಾಡಬೇಕು. ಪ್ರತಿಯೊಬ್ಬರಿಗೂ ತೀರ್ಪುದಾರರ ಪ್ರೋತ್ಸಾಹದಾಯಕ ನುಡಿ ಗಾಯಕರಿಗೆ ಹುರುಪನ್ನು ತುಂಬುತ್ತಿದೆ ಎನ್ನುವುದಕ್ಕೆ ಅನುಮಾನ ಇಲ್ಲ.

—ಭಾರತೀ ಗಂಗಾಧರ್, ಬೆಂಗಳೂರು